ಆ) ಪ್ರಕೃತಿ ವಿಕೋಪ ಪರಿಹಾರ ನಿಧಿ ಯೋಜನೆಯಡಿಯಲ್ಲಿ ಶೇಕಡ 50ರ ರಿಯಾಯಿತಿ ಅಥವಾ ಪ್ರತಿ ಹೆಕ್ಟೇರಿಗೆ ಗರಿಷ್ಠ ರೂ 1,000–00 ಗಳ ಮಿತಿಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬಿತ್ತನೆ ಬೀಜಗಳನ್ನು 13 ಬೆಳೆಗಳಲ್ಲಿ ನೀಡಲಾಗುತ್ತಿದೆ.

ಇ) ರಾಜ್ಯದ 24 ಜಿಲ್ಲೆಗಳಲ್ಲಿನ 134 ತಾಲ್ಲೂಕುಗಳಲ್ಲಿನ ಸಣ್ಣ ಮತ್ತು ಅತಿ ಸಣ್ಣ ರೈತರುಗಳು ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ಪಡೆಯಬಹುದಾಗಿದೆ.

ಈ) ಜೂನ್ ಅಂತ್ಯಕ್ಕೆ 32158 ಕ್ವಿಂಟಾಲ್ ಬಿತ್ತನೆ ಬೀಜ ವಿತರಿಸಲಾಗಿದೆ. ವಿವರ ಕೆಳಕಂಡಂತಿದೆ.

| | |
|---|---|
| ಭತ್ತ | 5295 |
| ರಾಗಿ | 129 |
| ಜೋಳ | 1301 |
| ಮುಸುಕಿನಜೋಳ | 7104 |
| ಸಜ್ಜೆ | 376 |
| ತೊಗರಿ | 1712 |
| ಉದ್ದು | 1456 |
| ಹೆಸರು | 1144 |
| ಅಲಸಂದೆ | 154 |
| ಶೇಂಗಾ | 1607 |
| ಸೂರ್ಯಕಾಂತಿ | 1547 |
| ಸೋಯಅವರೆ | 9275 |
| ಹತ್ತಿ | 1058 |
| ಒಟ್ಟು | **32158** |

ಉ) ಇಲ್ಲ. ಪ್ರಕೃತಿ ವಿಕೋಪ ಪರಿಹಾರ ನಿಧಿ ಯೋಜನೆಯಡಿ ಸಣ್ಣ ಮತ್ತು ಅತಿ ಸಣ್ಣ ಖಾತೆ ಇರುವ ರೈತರಿಗೆ ಮಾತ್ರ ಬಿತ್ತನೆ ಬೀಜ ನೀಡಲಾಗುವುದು.

**ತುಂಗಾ ಎಡದಂಡೆ ಮತ್ತು ಬಲದಂಡೆ ನಾಲೆಗಳಿಗೆ ಖರ್ಚಾಗಿರುವ ಹಣದ ಬಗ್ಗೆ**

4216 (4897) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಂಗಾ ಎಡದಂಡೆ, ಬಲದಂಡೆ ನಾಲೆಗಳಿಗೆ 01.04.2000 ರಿಂದ 30.06.2003 ರ ನೆರವಿಗೆ ಖರ್ಚು ಮಾಡಿರುವ ಹಣವೆಷ್ಟು;

ಆ) ನಾಲೆಗಳಿಗೆ ಕಳೆದ ಮೂರು ವರ್ಷಗಳಿಂದ ಮಾಡಿರುವ ಮೊಬಲಗೆಷ್ಟು; (ವರ್ಷವಾರು ವಿವರ ನೀಡುವುದು)

ಇ) ಶಿವಮೊಗ್ಗ ಜಿಲ್ಲೆ ಗಾಜನೂರು ಆಣೆಕಟ್ಟು ಪಕ್ಕದಲ್ಲಿ ಕಟ್ಟಲಾಗುತ್ತಿರುವ ತುಂಗಾ ಮೇಲ್ದಂಡೆ ಯೋಜನೆಗೆ ಮಂಜೂರಾಗಿರುವ ಅಂದಾಜು ಎಷ್ಟು?

ಈ) ಇದುವರೆಗೂ ಮುಗಿದಿರುವ ಕಾಮಗಾರಿಗಳು ಯಾವುವು; ಇನ್ನೂ ಎಷ್ಟು ಬಾಕಿ ಇದೆ;

ಉ) ಈ ಯೋಜನೆಗೆ ಇದುವರೆವಿಗೂ ಖರ್ಚಾದ ಹಣ ಎಷ್ಟು ಹಾಗೂ ಇನ್ನು ಎಷ್ಟು ಹಣದ ಅವಶ್ಯಕತೆ ಇದೆ? (ವಿವರ ಒದಗಿಸುವುದು)

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಒಟ್ಟು ರೂ. 141.40 ಲಕ್ಷ ವೆಚ್ಚ ಭರಿಸಲಾಗಿದೆ.

ಆ) 2000–01 ನೇ ಸಾಲಿಗೆ ರೂ. 67,64 ಲಕ್ಷ
2001–02 ನೇ ಸಾಲಿಗೆ ರೂ. 40,97 ಲಕ್ಷ
2002–03ನೇ ಸಾಲಿಗೆ ರೂ. 26.24 ಲಕ್ಷ
2003–04ನೇ ಸಾಲಿಗೆ
ಜೂನ್ –03 ರ ಅಂತ್ಯಕ್ಕೆ ರೂ 5.65 ಲಕ್ಷ
ಒಟ್ಟು ರೂ.141.40 ಲಕ್ಷ

ಇ) ತುಂಗಾ ಮೇಲ್ದಂಡೆ ಯೋಜನೆಯ ತುಂಗಾ ಅಣೆಕಟ್ಟೆಯ ಅಂದಾಜು ವೆಚ್ಚ ರೂ. 271.41 ಕೋಟಿ

ಈ) ತುಂಗಾ ಮೇಲ್ದಂಡೆ ಯೋಜನೆಯ ಅಣೆಕಟ್ಟೆಯ ಸಿವಿಲ್ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದ್ದು, ಗೇಟ್ ಅಳವಡಿಸುವ ಕೆಲಸ ಪ್ರಗತಿಯಲ್ಲಿದೆ. ತುಂಗಾ ಮೇಲ್ದಂಡೆ ಕಾಲುವೆಯು 329.5 ಕಿ.ಮೀ. ಉದ್ದ ಇದ್ದು ಈ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಉ) ಯೋಜನೆ ಪ್ರಾರಂಭವಾದಾಗಿನಿಂದ ಜೂನ್ 2003 ರ ಅಂತ್ಯದವರೆಗೆ ಒಟ್ಟು ರೂ. 253.70 ಕೋಟಿ ವೆಚ್ಚವಾಗಿರುತ್ತದೆ. ಈ ಯೋಜನೆಯ ಮಾರ್ಪಾಡಿತ ಅಂದಾಜು ವೆಚ್ಚ ರೂ. 1052.33 ಕೋಟಿಯಿದ್ದು ಪೂರ್ಣಗೊಳಿಸಲು ಇನ್ನೂ ರೂ. 798.63 ಕೋಟಿಗಳ ಅವಶ್ಯಕತೆ ಇದೆ.

**ಶಿವಮೊಗ್ಗ ಜಿಲ್ಲೆಯಲ್ಲಿ ಬಡತನ ರೇಖೆಗಿಂತ ಕೆಳಗಿರುವವರಿಗೆ ಪಡಿತರ ಚೀಟಿಗಳ ವಿತರಣೆಯ ಬಗ್ಗೆ**

4217 (4898) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿತರಿಸಲಾಗಿರುವ ಹಸಿರು ಕಾರ್ಡ್, ಹಳದಿ ಕಾರ್ಡ್ ಹಾಗೂ ಕೆಂಪು ಪಡಿತರ ಚೀಟಿಗಳ ವಿವರಗಳನ್ನು ತಾಲ್ಲೂಕುವಾರು ನೀಡುವುದು?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿತರಿಸಲಾಗಿರುವ ಹಸಿರು ಕಾರ್ಡ್, ಹಳದಿ ಕಾರ್ಡ್ ಹಾಗೂ ಕೇಸರಿ ಪಡಿತರ ಚೀಟಿಗಳ ವಿವರ ಕೆಳಗಿಂತಿದೆ.

| ಕ್ರ. ಸಂ. | ತಾಲ್ಲೂಕಿನ ಹೆಸರು | ವಿತರಿಸಲಾಗಿರುವ ಪ. ಚೀ.ವಿವರ ಹಸಿರು | ಹಳದಿ | ಅಂ.ಅ. | ಕೇಸರಿ ಪೋಟೋ | ಒಟ್ಟು |
|---|---|---|---|---|---|---|
| 1. | ಶಿವಮೊಗ್ಗ ಅ.ಪ | 7154 | – | 534 | 43376 | 95889 |
| | ಶಿವಮೊಗ್ಗ ಗ್ರಾ | 30596 | – | 2074 | 12155 | |